**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಆಸುಇ 27 ಸೇಲೋಯು 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:11.09.2018.

# ಸು ತ್ತೋ ಲೆ

ವಿಷಯ : ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಪ್ರಕರಣ 12(3)ರಡಿಯಲ್ಲಿ ಮಾನ್ಯ ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರು ಮಾಡುವ ವರದಿಗಳನ್ನು ಸಕ್ಷಮ ಪ್ರಾಧಿಕಾರಗಳು ಪ್ರಕರಣ 12(4)ರಡಿ ಪರಿಶೀಲಿಸುವ ಬಗ್ಗೆ.

******

ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಪ್ರಕರಣ 12ರ ಉಪ–ಪ್ರಕರಣ (3) ಮತ್ತು (4)ರ ಉದ್ಧೃತ ಭಾಗ ಕೆಳಕಂಡಂತಿದೆ:–

"(3) If, after investigation of any action involving an allegation has been made, the Lokayukta or an Upalokayukta is satisfied that such allegation is substantiated either wholly or partly, he shall by report in writing communicate his findings and recommendations along with the relevant documents, materials and other evidence to the competent authority.

(4) The Competent authority shall examine the report forwarded to it under sub-section (3) and within three months of the date of receipt of the report, intimate or cause to be intimated to the Lokayukta or the Upalokayukta the action taken or proposed to be taken on the basis of the report. "

2. ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಪ್ರಕರಣ 12(3)ರನ್ವಯ ಮಾನ್ಯ ಲೋಕಾಯುಕ್ತರು ಅಥವಾ ಉಪ ಲೋಕಾಯುಕ್ತರು ಆಪಾದನೆಯನ್ನೊಳಗೊಂಡ ಯಾವುದೇ ಕ್ರಮದ ಬಗ್ಗೆ ತನಿಖೆ ನಡೆಸಿದ ನಂತರ ಅಂಥ ಆಪಾದನೆಯನ್ನು ಪೂರ್ಣವಾಗಿ ಅಥವಾ ಭಾಗಶಃ ಸಮರ್ಥಿಸಲಾಗಿದೆ ಎಂದು ಮನದಟ್ಟಾದಾಗ ತಮ್ಮ ನಿರ್ಣಯ/ಶಿಫಾರಸ್ಸನ್ನು ದಾಖಲಿಸಿ, ಸಂಬಂಧಪಟ್ಟ ಎಲ್ಲಾ ದಾಖಲಾತಿಗಳೊಂದಿಗೆ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಲು ಆಸ್ಪದವಿದೆ.

3. ಹಾಗೂ ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಪ್ರಕರಣ 12(4)ರನ್ವಯ ಸಕ್ಷಮ ಪ್ರಾಧಿಕಾರವು, ಪ್ರಕರಣ 12(3)ರ ಮೇರೆಗೆ ತನಗೆ ಕಳುಹಿಸಿದ ವರದಿಯನ್ನು ಪರೀಕ್ಷಿಸಿ, ಆ ವರದಿ ಬಂದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಆ ವರದಿಯನ್ನು ಆಧರಿಸಿ ಕೈಗೊಂಡ, ಇಲ್ಲವೇ ಕೈಗೊಳ್ಳಲು ಉದ್ದೇಶಿಸಿದ ಕ್ರಮವನ್ನು ಲೋಕಾಯುಕ್ತರಿಗೆ ಅಥವಾ ಉಪಲೋಕಾಯುಕ್ತರಿಗೆ ತಿಳಿಸಬೇಕಾಗಿರುತ್ತದೆ.

4. ಆದರೆ, ಕೆಲವು ಸಕ್ಷಮ ಪ್ರಾಧಿಕಾರಗಳು ಮಾನ್ಯ ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಪ್ರಕರಣ 12(3)ರಡಿಯಲ್ಲಿ ಕಳುಹಿಸುವ ವರದಿಯ ಪ್ರತಿಯನ್ನು ಪ್ರತಿವಾದಿ(ಆಪಾದಿತ ಸರ್ಕಾರಿ ನೌಕರ)ಗೆ ಕಳುಹಿಸಿ, ಅವರಿಂದ ಲಿಖಿತ ಹೇಳಿಕೆಗಳನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

5. ವಾಸ್ತವವಾಗಿ, ಮಾನ್ಯ ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರು ಪ್ರಕರಣ 12(3)ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸುವ ವರದಿಯ ಮೇಲೆ ಮುಂದಿನ ಕ್ರಮವು ಕೇವಲ ಲೋಕಾಯುಕ್ತ ಸಂಸ್ಥೆ ಹಾಗು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದ ನಡುವೆ ಮಾತ್ರ ಇರಬೇಕಾಗಿದ್ದು, ಸ್ವೀಕೃತ ವರದಿಯ ಮೇಲೆ ಪ್ರಕರಣ 12(4)ರ ಮೇರೆಗೆ ಸಕ್ಷಮ ಪ್ರಾಧಿಕಾರ ಸ್ವೀಕೃತವಾದ ಕಲಂ 12(3) ವರದಿಯನ್ನು ಪರೀಕ್ಷಿಸಿ ಹಾಗೂ ಸದರಿ ವರದಿಯನ್ನು ಆಧರಿಸಿ ಕೇವಲ ಸಕ್ಷಮ ಪ್ರಾಧಿಕಾರ ಮಾತ್ರ ತನ್ನ ಯುಕ್ತ ವಿವೇಚನೆ ಉಪಯೋಗಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಹಾಗೂ ಕೈಗೊಂಡ ಇಲ್ಲವೇ ಕೈಗೊಳ್ಳಲು ಉದ್ದೇಶಿಸಿದ ಕ್ರಮವನ್ನು ಮಾನ್ಯ ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರಿಗೆ ಕಲಂ 12(3) ವರದಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ತಿಳಿಸಬೇಕಾಗಿರುತ್ತದೆ. ಸದರಿ ವರದಿಯ ಪ್ರತಿಯನ್ನು ಪ್ರತಿವಾದಿ(ಆಪಾದಿತ ಸರ್ಕಾರಿ ನೌಕರ)ಗೆ ನೀಡಿ, ಅವರಿಂದ ಹೇಳಿಕೆಗಳನ್ನು ಪಡೆಯಲು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರಡಿಯಲ್ಲಿ ಅವಕಾಶ ಕಲ್ಪಿಸಿರುವುದಿಲ್ಲ.

6. ಆದುದರಿಂದ, ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ ಪ್ರಕರಣ 12(3)ರಡಿಯಲ್ಲಿ ಮಾನ್ಯ ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರು ಕಳುಹಿಸುವ ವರದಿಯ ಪ್ರತಿಯನ್ನು ಭವಿಷ್ಯದಲ್ಲಿ ಸಂಬಂಧಿತ ಸರ್ಕಾರಿ ನೌಕರರಿಗೆ ಕಳುಹಿಸುವ ಅವಶ್ಯಕತೆ ಇಲ್ಲವೆಂದು ಹಾಗೂ ಅದರ ಮೇಲೆ ಅವರ ಹೇಳಿಕೆ ಪ್ರತಿಕ್ರಿಯೆ ಮುಂತಾದ ಕ್ರಮಗಳನ್ನು ಜರುಗಿಸಲು ಯಾವುದೇ ಅವಕಾಶವಿರುವುದಿಲ್ಲವೆಂದು ಸೂಚಿಸಿದೆ. ಈ ಅಂಶವನ್ನು ಗಣನೆಗೆ ತೆಗೆದುಕೊಂಡು, ಪ್ರಕರಣ 12(4)ರ ಅಗತ್ಯತೆಗಳನ್ನು ವಿಳಂಬವಿಲ್ಲದೇ ಪಾಲಿಸತಕ್ಕದ್ದೆಂದು ಎಲ್ಲಾ ಸಕ್ಷಮ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ.

(ಟಿ.ಎಂ.ವಿಜಯ್ ಭಾಸ್ಕರ್)
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**

ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ ವಿಭಾಗ, ಬೆಂಗಳೂರು – ಇದನ್ನು ಕರ್ನಾಟಕ ರಾಜ್ಯಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ ಅದರ 50 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು.ಇಲಾಖೆ (ಜಾಗೃತ ವಿಭಾಗ), ವಿಕಾಸ ಸೌಧ, ಬೆಂಗಳೂರು, ಇವರಿಗೆ ಕಳುಹಿಸುವಂತೆ ಕೋರಲಾಗಿದೆ **(ಮುಖಪತ್ರದೊಂದಿಗೆ)**

**ಪ್ರತಿಗಳು:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
2. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ–1/–2, ವಿಧಾನಸೌಧ.

3. ಎಲ್ಲಾ ಇಲಾಖಾ ಮುಖ್ಯಸ್ಥರು.
4. ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
5. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
6. ಸರ್ಕಾರದ ಎಲ್ಲಾ ವಿಶೇಷ/ಅಪರ/ಸಹ/ಉಪ/ಅಧೀನ ಕಾರ್ಯದರ್ಶಿಗಳು.
7. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಕಡತ.

ಈ ಸುತ್ತೋಲೆಯು ಸರ್ಕಾರದ ಅಂತರ್ಜಾಲ **http://www.karnataka.gov.in/svahini**ಯಲ್ಲಿ ಲಭ್ಯವಿರುತ್ತದೆ.